(6ನೇ ಪುಟದಿಂದ)

ಕಾರವಾರ, ಹುಬ್ಬಳ್ಳಿ, ಮುಂಬೈ, ಭೋಪಾಲ್, ರಾಣೆಬೆನ್ನೂರಿನಲ್ಲಿ ಬೇಡಿಕೆ ಹೊಂದಿರುವ ರಾಣಿ ಎಲೆಗಳು, ರಾಣೆಬೆನ್ನೂರು ಮಾರುಕಟ್ಟೆ ಮೂಲಕ ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶಗಳಿಗೆ ರವಾನೆಯಾಗುತ್ತಿವೆ. ರಾಣೆಬೆನ್ನೂರಿನಲ್ಲಿ ಸ್ಥಳೀಯವಾಗಿ ಬೆಳೆಯುವ ಮಾಂಡವ ವೀಳ್ಯದೆಲೆಗೆ ಬೇಡಿಕೆ ಕುದುರುವವರೆಗೂ ರಾಣಿ ಎಲೆಗಳಿಗೆ ಉತ್ತಮ ದರವಿತ್ತು. ಬೆಳೆಗಾರರು ಕೈತುಂಬ ಲಾಭ ಕಂಡಿದ್ದರು. ಯಾವಾಗ ಮಾಂಡವ ಎಲೆಗಳು ಮಾರುಕಟ್ಟೆ ಪ್ರವೇಶಿಸಿದವೋ ಆಗ ರಾಣಿ ಎಲೆ ದರ ಇಳಿಯಿತು.

ಹೊನ್ನಾವರ ತಾಲ್ಲೂಕಿನ ಹೊಸಾಕುಳಿ, ಪಂಚಗ್ರಾಮ, ಭಾಸ್ಕೇರಿ, ಗುಣವಂತೆ, ಇಡಗುಂಜಿ, ಕಡತೋಕಾ, ವಾಲಗಳ್ಳಿ, ಕೂಜಳ್ಳಿ, ಹೆಬ್ಬಾರ್ನಕೆರೆ ಮೊದಲಾದ ಊರುಗಳ ಅಡಿಕೆ ತೋಟಗಳಲ್ಲಿ ವೀಳ್ಯದೆಲೆಯನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ. ‘ಸೀಜನ್‌ನಲ್ಲಿ 500 ಚೂಳಿಗಳಷ್ಟು ಎಲೆಗಳು ಪ್ರತಿನಿತ್ಯ ರಾತ್ರಿ ರವಾನೆಯಾಗುತ್ತಿದ್ದರೆ, ಈಗ 150 ಚೂಳಿಗಳಷ್ಟು ಹೋಗುತ್ತಿವೆ’ ಎನ್ನುತ್ತಾರೆ ಹೆಬ್ಬಾರ್ನಕೆರೆಯ ಸುಬ್ರಹ್ಮಣ್ಯ ಭಟ್.

ಮೊದಲೆಲ್ಲ ಎಲೆ ಕೊಯ್ಯಲು ಕೂಲಿಯಾಳು ಸಾಹಸ ಮಾಡಬೇಕಿತ್ತು. ಈಗ ಆಧುನಿಕ ಏಣಿಗಳು ತೋಟವನ್ನು ಪ್ರವೇಶಿಸಿರುವುದರಿಂದ ಆಳುಗಳು ಎಲೆ ಕೊಯ್ಯಲು ಅನುಕೂಲವಾಗಿದೆ. ಒಂದು ದಿನಕ್ಕೆ ನೂರು ಕಟ್ಟು ಎಲೆಗಳನ್ನು (10 ಸಾವಿರ ಎಲೆಗಳು) ಕೊಯ್ಯುವವರೂ ಇದ್ದಾರೆ. ಇಷ್ಟು ಕೊಯ್ದರಷ್ಟೇ ಅವರು 500–600 ರೂಪಾಯಿ ಕೂಲಿ ಗಳಿಸಲು ಸಾಧ್ಯ. ಭಾರತದಿಂದ ಪಾಕಿಸ್ತಾನಕ್ಕೆ ಬಸ್ ಸಂಚರಿಸುತ್ತಿದ್ದ ವರ್ಷಗಳಲ್ಲಿ ಇಲ್ಲಿನ ರಾಣಿ ಎಲೆಗಳು ಪಾಕಿಸ್ತಾನಕ್ಕೆ ಹೋಗುತ್ತಿದ್ದವು. ಆಗ ದರವೂ ಒಂದು ಕಟ್ಟಿಗೆ 30ರೂಪಾಯಿ ಸಿಗುತ್ತಿತ್ತು. ಈಗ ಹೆಚ್ಚೆಂದರೆ 12 ರೂಪಾಯಿ ಸಿಗಲಿದೆ. ಆದರೂ ನಮ್ಮೂರ ರಾಣಿ ಎಲೆ ನೆಲೆ ಕಳೆದುಕೊಳ್ಳದಿರಲಿ ಎಂದು ಕಾರಣಕ್ಕೆ ಬೆಳೆಯಲಾಗುತ್ತಿದೆ’ ಎಂದು ಸುಬ್ರಹ್ಮಣ್ಯ ಭಟ್ ಹೇಳುತ್ತಾರೆ.

‘ಎಲೆ ಕೊಯ್ಯುವ ಆಳಿಗೆ ಕೂಲಿ, ಕೊಯ್ದ ನಂತರ ಎಲೆಗಳ ಜೋಡಣೆಗೆ ಮತ್ತೆ ಕೂಲಿ – ಇಷ್ಟೆಲ್ಲ ಕಳೆದ ಮೇಲೆ ಬೆಳೆದವರಿಗೆ ಉಳಿಯೋದು ಕಟ್ಟಿನ ಮೇಲೆ 3–4 ರೂಪಾಯಿ. ಇಂಥ ಲೆಕ್ಕಾಚಾರ ಬಿಟ್ಟರೆ ಲಾಭದ ಮಾತಿಲ್ಲ’ ಎನ್ನುವುದು ಕೃಷಿಕರಾದ ಗಣೇಶ ಭಟ್ ಅನುಭವದ ಮಾತು. ವೈರುಧ್ಯ ಎಂದರೆ, ಗ್ರಾಹಕ ಇದೇ ಎಲೆ ಖರೀದಿಸುವಾಗ ಕಟ್ಟಿನ ನೂರು ರೂಪಾಯಿ ದಾಟುತ್ತದೆ. ಶ್ರಾವಣ, ಗಣೇಶ ಚೌತಿ ವೇಳೆ ದರ ತುಸು ಏರಿದಂತೆ ಕಂಡರೂ ತುಸು ಲಾಭ ಕಾಣುವವರು ಮಾತ್ರ ಮಧ್ಯವರ್ತಿಗಳು.

ವೀಳ್ಯದೆಲೆಗೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನಲ್ಲಿ ದೊಡ್ಡ ಮಾರುಕಟ್ಟೆಯೇ ಇದೆ. ಬೇರೆ ಬೇರೆ ಕಡೆಗಳಿಂದ ರಾಣೆಬೆನ್ನೂರಿಗೆ ಬಂದಿಳಿಯುವ ಎಲೆಗಳು ಅಲ್ಲಿಂದ ಮುಂದೆ ದೇಶದ ವಿವಿಧ ಭಾಗಗಳಿಗೆ ರವಾನೆಯಾಗುತ್ತವೆ.

‘ಈಗ ಏಳೆಂಟು ವರ್ಷಗಳಿಂದ ಎಲೆ ಅಡಿಕೆ ತಿನ್ನುವವರ ಸಂಖ್ಯೆ ಇಳಿಮುಖವಾದಂತೆ ಎಲೆಯ ದರವೂ ಕಡಿಮೆಯಾಗುತ್ತಾ ಬಂದಿತು. ಕಳೆದ 8–10 ವರ್ಷಗಳಿಂದ ವೀಳ್ಯದೆಲೆ ಬೆಳೆಯುವುದರಿಂದಾಗಲಿ, ಮಾರುಕಟ್ಟೆ ಮಾಡುವುದರಿಂದಾಗಲಿ ಅಂಥ ಲಾಭವೇನೂ ಇಲ್ಲ. ಅದರ ಪಾಡಿಗದು ನಡೀತಿದೆ ಅಷ್ಟೆ’ ಎನ್ನುತ್ತಾರೆ ರಾಣೆಬೆನ್ನೂರಿನ ವೀಳ್ಯದೆಲೆ ವ್ಯಾಪಾರಿ ಮಲ್ಲಿಕಾರ್ಜುನ ಕುದ್ರಿಹಾಳ.

ಸದ್ಯಕ್ಕೆ ‘ರಾಣಿ ಎಲೆ’ಗಳ ಮಾರುಕಟ್ಟೆ ಮಂಕಾಗಿದೆ. ಮುಂದೊಂದು ದಿನ ಇದಕ್ಕೆ ಬೇಡಿಕೆ ಕುದುರಿದರೆ ಹೊಸತೊಂದು ಪೇಟೆ ತೆರೆದುಕೊಂಡರೆ ‘ರಾಣಿ’ಯರ ಮುಖದಲ್ಲಿ ನಗೆ ಮತ್ತೆ ಲಕಲಕಿಸಬಹುದು.





